MADAM SPEAKER.—I have received it at 8.25 A. M to day, I will examine it.

KARNATAKA VILLAGE PANCHAYATS (POSTPONEMENT OF ELECTIONS) BILL, 1975

INTRODUCTION

SRI N. RACHAIAH (Minister for Rural Development and Social Welfare) : —

Madam, I beg to introduce the Karnataka Village Panchayats (Postponment of Elections) Bill, 1975.

MADAM SPEAKER.—The Bill is introduced*.

RETRENCHMENT ORDERS TO LOCALLY APPOINTED SCHOOL TEACHERS

ಶ್ರೀ ಕಾಗೋಡು ತಿಮ್ಮಪ್ಪ (ನಾಗರ) :—ಸ್ಥಳಿಯ ಸಂಸ್ಥೆಗಳಿಗೆ ಸೇರಿದ ಪ್ರೌಢ ಶಾಲೆಗಳನ್ನು ಸರ್ಕಾರದವರು ಇತ್ತೀಚೆಗೆ ತೆಗೆದುಕೊಂಡಿದ್ದಾರೆ. ಸುಮಾರು ಎರಡುಸಾವಿರ ಉಪಾಧ್ಯಾಯರುಗಳನ್ನು ತಾರೀಕು 1-4-1971 ಮತ್ತು 1-4-1973ರ ನಂತರ ನೇಮಕ ಮಾಡಿದ್ದಾರೆ. ಅವರನ್ನು ತಾರೀಕು 10-3-1975 ರಂದು ನಿವೃತ್ತಿಗೊಳಿಸಬೇಕೆಂದು ಸರ್ಕಾರದಿಂದ ಆಜ್ಞೆ ಹೊರಡಿಸಿದ್ದಾರೆ. ಸರ್ಕಾರ ವಹಿಸಿಕೊಳ್ಳುವುದಕ್ಕೆ ಮುಂಚೆ ಎರಡು ಸಾವಿರ ಉಪಾಧ್ಯಾಯರನ್ನು ನೇಮಿಸಿಕೊಂಡಿದ್ದಾರೆ.

ಅಧ್ಯಕ್ಷರು :—ಉತ್ತರ ಬಂದ ತಕ್ಷಣ ಇದನ್ನು ಹಾಕಿಸುತ್ತೇನೆ. ಮುಂಗಳ ವಾರ ಸ್ಟೇಟ್‌ಮೆಂಟ್ ಮಾಡುತ್ತಾರೆ.

TAKING UP SOME NOTICES

ಶ್ರೀ ಎಂ. ಎಸ್. ಕೃಷ್ಣನ್ :—ಮಾನ್ಯ ಅಧ್ಯಕ್ಷರೇ, 312ರ ಪ್ರಕಾರ ನೋಟೀಸ್ ಕಳುಹಿಸಿ ಸುಮಾರು 6-7 ದಿವಸಗಳಾಯಿತು ಇನ್ನೂ ಉತ್ತರ ಬಂದಿಲ್ಲ. ತಾವು ಬರುತ್ತೆ ಎಂದು ಆಶ್ವಾಸನೆ ಕೊಡುತ್ತಲೇ ಇದ್ದೀರಿ. ಮಂತ್ರಿ ಕಾಜಲಗಿಯವರ ಮೇಲೆ ಮರ್ಡರ್ ಕೇಸ್ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ.

Bill appended as Annexure to this volume.

ಅಧ್ಯಕ್ಷರು :—ಮುಖ್ಯ ಮಂತ್ರಿಗಳು ಬರಲಿ.

ಶ್ರೀ ಎಂ. ಎಸ್. ಕೃಷ್ಣನ್ :— ಸೋಮವಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಜೆ. ಎಲ್. ಕಬಾಡಿ :—ನನ್ನ ಮತಕ್ಷೇತ್ರದಲ್ಲಿ ಹರಿಜನರ ಮೇಲೆ ಪೋಲೀಸಿನವರು ನಡೆಸಿದಂತ ದೌರ್ಜನ್ಯ ಬಗ್ಗೆ ಶನಿವಾರ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಿರಿ. ಈ ದಿವಸದ ಅಜಂಡಾದಲ್ಲಿ ಸೇರಿಲ್ಲ.

ಅಧ್ಯಕ್ಷರು :....ಸೋಮವಾರ ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ :....ಮಂತ್ರಿಮಂಡಲದಲ್ಲಿ ಕೆಲವು ಮಂತ್ರಿಗಳನ್ನು ಬಿಟ್ಟಿದಕ್ಕೆ ಕಾರಣ ಏನು ಎಂದು ಕಳುಹಿಸಿದ್ದೆ ಇದಕ್ಕೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು ; ಉತ್ತರ ಬಂದ ತಕ್ಷಣ ಸೇರಿಸುತ್ತೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ : ಮಾನ್ಯ ವಿರೋಧಪಕ್ಷದ ನಾಯಕರು, ವಿದ್ಯುಚ್ಛಕ್ತಿ ಮಂತ್ರಿಗಳು ಅನೇಕ ಪದವಿಗಳಲ್ಲಿ ಇದಾರೆ. ಮಂತ್ರಿ ಪದವಿಯಲ್ಲಿ ಇರುವಾಗ ಬೇರೆ ಅಧಿಕಾರಗಳನ್ನ ವಹಿಸಿಕೊಂಡಿರತಕ್ಕ ವಿಚಾರದಲ್ಲಿ ನಾನು ಒಂದು ವಿಚಾರ ಹೇಳುತ್ತೇನೆ. ಮಾನ್ಯ ಶಂಕರೇಗೌಡರು ಮಂತ್ರಿಗಳು ಆಗಿದ್ದಾಗ .....

ಅಧ್ಯಕ್ಷರು ;—ಶಂಕರೇಗೌಡರಿಂದ ಬಂದಿರುವ ಕಾಗದವನ್ನು ಮಂತ್ರಿಗಳಿಗೆ ಕಳುಹಿಸಿದ್ದೇನೆ. ಅವರು ಸ್ಟೇಟ್‌ಮೆಂಟ್ ಮಾಡಿ ಹೇಳಿಕೆ ಕೊಡಬೇಕಾಗುತ್ತದೆ.

9-30 A.M.

ಶ್ರೀ ಕಾಗೋಡು ತಿಮ್ಮಪ್ಪ ;—ಇಂಥ ವಿಷಯದಲ್ಲಿ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ತತ್‌ಕ್ಷಣ ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು ; ಈ ವಿಷಯದ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಿ ಎಂದು ಈಗಾಗಲೇ ಮಂತ್ರಿಗಳಿಗೆ ಹೇಳಿದ್ದೇನೆ.

ALLEGED POLICE EXCESSES OVER HARIJANS IN KOLAR

ಶ್ರೀ ಕಾಗೋಡು ತಿಮ್ಮಪ್ಪ :—ಅಧ್ಯಕ್ಷರೇ ನಾನು, ಬೈರೇಗೌಡರು, ಒಟ್ಟು 4 ಜನ ಸೇರಿ ರೂಲ್ 312ರ ಕೆಳಗೆ, ಕೋಲಾರ ಜಿಲ್ಲೆಯಲ್ಲಿ ಗೇಣಿದಾರರ